# CMRIT bags First prize at i2-Academia Pavillion-22

**Publication: Eesanje**
**Date:22-06-22 Page 07**

# ಸಿಎಂಆರ್‌ಐಟಿ ತಂಡಕ್ಕೆ ಅಂತಾರಾಷ್ಟ್ರೀಯ ಪ್ರಶಸ್ತಿ



**ಬೆಂಗಳೂರು, ಜೂ.22-** ಇತ್ತೀಚೆಗೆ ನಡೆದ 7ನೇ ಅಂತಾರಾಷ್ಟ್ರೀಯ ತಂತ್ರಜ್ಞಾನ ಇಂಟೆಕ್ಸ್ ಫಾರ್ಮಿಂಗ್-2022 ಮೇಳದಲ್ಲಿ ಡಾ. ಸಾಗರ್ ನೇತೃತ್ವದ ತಂಡ ಪ್ರದರ್ಶಿಸಿದ ಯಾಂತ್ರಿಕ ಎಂಜಿನಿಯರಿಂಗ್‌ನ ಪ್ರಮುಖ ಆವಿಷ್ಕಾರ 3ಡಿ ಮುದ್ರಣ ತಂತ್ರಜ್ಞಾನದಿಂದ ವೈದ್ಯಕೀಯ ಚಿಕಿತ್ಸೆಯ ಬಳಕೆಗೆ ರೂಪಿಸಿದ ದೇಹಾಂಗ ಕಸಿ ಜೋಡಣೆಗೆ ಉಪಯುಕ್ತವಾದ ಆವಿಷ್ಕಾರಕ್ಕೆ ಅಂತರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಈ ಅಂತಾರಾಷ್ಟ್ರೀಯ ತಂತ್ರಜ್ಞಾನ ಮೇಳದಲ್ಲಿ 16 ದೇಶಗಳಿಂದ ಒಟ್ಟು 350 ತಂಡಗಳು ಭಾಗವಹಿಸಿದ್ದು, 700ಕ್ಕೂ ಹೆಚ್ಚು ತಂತ್ರಜ್ಞಾನ ಯಂತ್ರಗಳು ಈ ಮೇಳದಲ್ಲಿ ಪ್ರದರ್ಶನಗೊಂಡವು.

ಅಂತಾರಾಷ್ಟ್ರೀಯ ಮೇಳದಲ್ಲಿ ಪ್ರಶಸ್ತಿ ಪಡೆದು ಮಾತನಾಡಿದ ಮ್ಯಾಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕ ಡಾ. ಸಾಗರ್, ಈ ತಂತ್ರಜ್ಞಾನ ಆವಿಷ್ಕಾರ ವೈದ್ಯಕೀಯ ರಂಗದಲ್ಲಿ ದೇಹಾಂಗ ಕಸಿ ಚಿಕಿತ್ಸಾ ವಿಭಾಗದಲ್ಲಿ ಸುಧಾರಣೆಗಳನ್ನು ತರಬಲ್ಲದು ಎಂದು ಅಭಿಪ್ರಾಯಪಟ್ಟರು.

ಸಿಎಂಆರ್‌ಐಟಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಜಯ್‌ಜೈನ್ ಡಾ.ಸಾಗರ್ ನೇತೃತ್ವದ ತಂಡದ ಸಾಧನೆಯನ್ನು ಮನ ದುಂಬಿ ಶ್ಲಾಘಿಸಿದರು.


per.eesanje.com
ಈ ಸಂಜೆ Wed, 22 June 2022
https://epaper.eesanje.com/c/6